7

ಸೋಮವಾರ ಬೆಳಿಗ್ಗೆ ಸುಮಾರು ಹತ್ತು ಗಂಟೆ ಸಮಯದಲ್ಲಿ ಅಮ್ಮು ಕೊಲೆಯಾಗಿದ್ದು. ಈಗ ಗುರುವಾರ ಬೆಳಿಗ್ಗೆ, ಬೆಳಕು ಹರಿಯುವ ಸಮಯ. ಮೂರು ದಿನ ಕಳೆದರೂ ಇನ್ನೂ ಶಂಕಿತರ ಅಂತಿಮ ಪಟ್ಟಿಯೂ ಪೂರ್ಣಗೊಂಡಿಲ್ಲ. ಮೆಲ್ಲಗೆ, ಆಗಿಂದಾಗ್ಗೆ ಮಾಯಣ್ಣನ ಆತ್ಮವಿಶ್ವಾಸ ಕರಗುತ್ತಾ, ಹತಾಶೆಯ ಭಾವ ಆವರಿಸಿಕೊಳ್ಳುತ್ತಿತ್ತು. ಅದೇ ಗುಂಗಲ್ಲಿ ಬೆಂಗಳೂರನ್ನು ಬೆಳಿಗ್ಗೆ 6ಕ್ಕೆ ಬಿಟ್ಟ. ಮಾಯಣ್ಣನ ತಂಡ ನೇರವಾಗಿ ಬಂದಿಳಿದಿದ್ದು ಮಡಿಕೇರಿಯ ಪೊಲೀಸು ಠಾಣೆ ಅಂಗಳದಲ್ಲೇ. ಬಾಗಿಲಲ್ಲೇ ಕಾದು ನಿಂತಿದ್ದ ಅಲ್ಲಿನ ಎಸ್ಐ ಪೂವಯ್ಯ, ಗೆಳೆಯ ಮಾಯಣ್ಣನನ್ನು ಆತ್ಮೀಯವಾಗಿ ಬರಮಾಡಿಕೊಂಡು, ಉಪಾಹಾರ ಉಪಚಾರಗಳ ನಂತರ, ಆತನ ಕೋರಿಕೆಯಂತೆ ಸೀದಾ ಅಮ್ಮು ಅವರ ಎಸ್ಟೇಟ್ ಬಂಗಲೆಗೆ ಕರೆದೊಯ್ಯಲು, ಒಬ್ಬ ಲೇಡಿ ಪೀಸಿಯನ್ನು ಜೊತೆ ಮಾಡಿ ಕಳುಹಿಸಿದ. ಒಬ್ಬಂಟಿ ಮಹಿಳೆಯ ಹೇಳಿಕೆ ಪಡೆಯುವ ಸಮಯದಲ್ಲಿ ಜೊತೆಗೆ ಒಬ್ಬ ಮಹಿಳಾ ಕಾನ್ಸ್‌ಟೆಬಲ್ ಇರುವ ಅವಶ್ಯಕತೆ ಇತ್ತು. ಎತ್ತರದಲ್ಲಿದ್ದ ಎಸ್ಟೇಟ್‌ನಿಂದ, ಕಣ್ಣು ಹಾಯಿಸಿದಷ್ಟು ದೂರಕ್ಕೂ ಕಾಣುವ ವಸುಂಧರೆ, ಸುಕ್ಕುಸುಕ್ಕಾಗಿ, ಅಂಚಿಲ್ಲದಂತೆ ಹರಡಿಕೊಂಡ, ಹಲವಾರು ಛಾಯೆಯ ಹಸಿರು ಹಾಸುಗಂಬಳಿಯಂತೆ ಕಂಗೊಳಿಸುತ್ತಿದ್ದಳು.

ಪ್ರಕೃತಿಯ ಸೃಷ್ಟಿಕ್ರಿಯೆಯ ಉತ್ತುಂಗತೆಯಲ್ಲಿ ಜನಿಸಿದ, ಸ್ವರ್ಗಕ್ಕೂ ಸೆಡ್ಡು ಹೊಡೆಯಬಲ್ಲ, ಇಂತಹ ದೇವಭೂಮಿಗಳನ್ನು ಬಿಟ್ಟು, ಏನನ್ನು ಅರಸಿ, ಇಲ್ಲಿನ ಜನ ಪಟ್ಟಣಗಳಿಗೆ ವಲಸೆ ಹೋಗಿ, ಅಲ್ಲಿ ಯಾವುದೋ ನಿರಾಕಾರ ರಕ್ಕಸ ಯಂತ್ರದ ಬಿಡಿಭಾಗವಾಗಿ ಸವೆಯುತ್ತಾರೆ ಎನ್ನುವುದು ಮಾಯಣ್ಣನಿಗೆ ಕಾಡುವ ಸೋಜಿಗವಾಗಿತ್ತು. ಕಾಫಿತೋಟವನ್ನು ಅಂಕುಡೊಂಕಾಗಿ ಸೀಳಿ ಚಾಚಿಕೊಂಡ ಒಳರಸ್ತೆಯಲ್ಲಿ, ಎಸ್ಟೇಟ್ ಮಧ್ಯದ ಬಂಗಲೆ ತಲುಪಲು, ಪೊಲೀಸು ಕಾರಿಗೆ ಎರಡು ನಿಮಿಷ ಬೇಕಾಗಿತ್ತು. ಸುಮಾರು ನೂರು ಮಳೆಗಾಲದ ಹೊಡೆತಕ್ಕೆ ಸಿಕ್ಕರೂ ಸಹ, ಕಾಲಕಾಲಕ್ಕೆ ಕಂಡ ದುರಸ್ತಿಯ ದೆಸೆಯಿಂದಲೋ ಏನೋ, ಅಮ್ಮು ಅವರ ಬಂಗಲೆ ಮನೆ ಇನ್ನೂ ಸುಸ್ಥಿತಿಯಲ್ಲೇ ಇತ್ತು. ಬಿಳಿ ಬಣ್ಣದ ಬೃಹತ್ ಕಟ್ಟಡಕ್ಕೆ, ಎತ್ತರದ ತಾರಸಿ, ವಿಶಾಲವಾದ ಮೊಗಸಾಲೆ, ಕೆಂಪು ನೆಲ, ಧಾರಾಳವಾಗಿ ಬಳಸಿದ ಮರಮಟ್ಟುಗಳು, ದೊಡ್ಡ ದೊಡ್ಡ ದುಂಡನೆಯ ಕಂಬಗಳು, ಅಲ್ಲಲ್ಲಿ ಅಲ್ಪ ಸ್ವಲ್ಪ ನವೀಕರಣದ ಹೊರತಾಗಿಯೂ ತನ್ನ ಅಸಲೀತನವನ್ನು ಜತನವಾಗಿ ಉಳಿಸಿಕೊಂಡು ಬಂದಿತ್ತು ಪುರಾತನ ಇಂಗ್ಲಿಷ್ ಬಂಗಲೆ. ತುಂಬು ಶ್ರದ್ಧೆಯ ಆರೈಕೆಯಲ್ಲಿ ನಳನಳಿಸುತ್ತಿತ್ತು ಕಾಫಿ ತೋಟ. ಇವೆಲ್ಲದರ ಏಕಮಾತ್ರ ಒಡತಿ, ಅರಳುವುದಕ್ಕೆ ಮೊದಲೇ ಕಮರಿಹೋದ ಹೂವಿನಂತೆ, ಇದೇ ಎಸ್ಟೇಟಿನ ಒಂದು ಮೂಲೆಯಲ್ಲಿ ಶವವಾಗಿ ನೆಲದಡಿ ಮಲಗಿದ್ದಳು. ಮಾಯಣ್ಣನು ಅಮ್ಮುವಿನ ಸಮಾಧಿಗೆ ತೆರಳಿ ತನ್ನ ನಮನಗಳನ್ನು ಸಲ್ಲಿಸಿ, ತನ್ನೀರ್ವ ಪೇದೆಗಳೊಂದಿಗೆ ಬಂಗಲೆಯನ್ನು ಪ್ರವೇಶಿಸುತ್ತಿದ್ದಂತೆ ವಿಜಯಮ್ಮನವರು ಬಾಗಿಲಲ್ಲೇ ಎದುರ್ಗೊಂಡು ಒಳಗೆ ಕರೆದು ಕುಳ್ಳಿರಿಸಿದರು. ದಟ್ಟವಾದ ಸೂತಕದ ಛಾಯೆ ಕವಿದ ಮನೆಯಲ್ಲಿ ಈ ಮಾತುಕತೆ ಕಷ್ಟವೆನಿಸಿದರೂ ಅನಿವಾರ್ಯವಾಗಿತ್ತು.

ಪರಸ್ಪರ ಪರಿಚಯ ಮತ್ತು ಎದುರಿಗೆ ತಂದಿಟ್ಟ ಚುರುಮುರಿ, ಕಾಫಿಯ ನಂತರ ವಿಜಯಮ್ಮನವರನ್ನು ಮಾತಿಗೆಳೆಯುವಂತೆ,

'ನಿಮ್ಮ ಕುಟುಂಬದ ಎರಡನೇ ಸಾವಿದು...'

ಅಲ್ಲಿಯತನಕ ಸ್ಥಿತಪ್ರಜ್ಞರಂತೆ ಸ್ಥಿರವಾಗಿದ್ದ ವಿಜಯಮ್ಮನವರು ಇದ್ದಕ್ಕಿದ್ದಂತೆ ಒಡ್ಡೊಡೆದ ಕೆರೆಯಂತೆ ಜೋರಾಗಿ ಬಿಕ್ಕಳಿಸುತ್ತಾ ಅಳಲಾರಂಭಿಸಿದ್ದರು. ಮಾಯಣ್ಣ, ಅವರನ್ನು ಹಾಗೆ ಅತ್ತು ಅವರಷ್ಟಕ್ಕೆ ಅವರೇ ಸಮಾಧಾನವಾಗಲು ಕಾದು, ನಂತರ–

'ಬಹುಶಃ ಅಮ್ಮು ಅವರು ನಿಮ್ಮ ಕುಟುಂಬಕ್ಕೆ ಬೆನ್ನೆಲುಬು, ಬೆಂಗಾವಲು ಎಲ್ಲಾ ಆಗಿದ್ದರೇನೊ?'

'ನಮ್ಮ ಯಜಮಾನರು ಆರ್ಮಿ ಕ್ಯಾಪ್ಟನ್ ಆಗಿದ್ದರು. ಅವರ ಪೆನ್ಷನ್ ಈಗಲೂ ಬರುತ್ತದೆ. ನಾನು ಈಗಲೂ ಗಟ್ಟಿಮುಟ್ಟಾಗಿದ್ದೇನೆ...'

ಸ್ವಾಭಿಮಾನಿ ಕೊಡವತಿಗೆ ಸ್ವಲ್ಪ ಅಭಿಮಾನ ಭಂಗವಾದಂತಿತ್ತು, ಆದರೆ ವಾಸ್ತವಿಕತೆಯ ಇನ್ನೊಂದು ಮಗ್ಗುಲನ್ನು ಒಪ್ಪಿಕೊಳ್ಳುವ ಘನತೆಯೂ ಇತ್ತು.

'ನನ್ನ ಬೆಳೆಯುತ್ತಿರುವ ಮಕ್ಕಳ ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ತನ್ನದೇ ಎಂದು ಭಾವಿಸಿ, ಅಮ್ಮು ನಿಜವಾದ ದೊಡ್ಡ ಅಕ್ಕನ ರೀತಿಯಲ್ಲಿ, ನಡೆದುಕೊಳ್ಳುತ್ತಿದ್ದಳು. ಸಾಕಷ್ಟು ಬದಲಾಗಿರುವ ಈ ಜಗತ್ತಿನಲ್ಲಿ ಮಕ್ಕಳು ಯಾವ ರೀತಿ ಸಿದ್ಧವಾಗಬೇಕು ಎನ್ನುವ ತಿಳಿವಳಿಕೆ ಅವಳಿಗಿತ್ತು. ನಾನು ಹೆಚ್ಚು ಓದಿ ಬರೆದವಳಲ್ಲ, ಹಾಗಾಗಿ ಈ ವಿಷಯದಲ್ಲಿ ಅವಳನ್ನು ಬಹಳ ಅವಲಂಬಿಸಿದ್ದೆ. ಇಡೀ ಎಸ್ಟೇಟಿನ ಆಡಳಿತ ತಾನು ಇದ್ದಲ್ಲಿಂದಲೇ, ಅವಳೇ ಮ್ಯಾನೇಜ್ ಮಾಡುತ್ತಿದ್ದಳು. ಅವಳಿಗೆ ಪೊಳ್ಳು ಯಜಮಾನಿಕೆಯ ಪ್ರದರ್ಶನದ ಗೀಳಿರಲಿಲ್ಲ. ಹಾಗಾಗಿ ನಮ್ಮ ನಡುವೆ ಒಳ್ಳೆಯ ಸಾಮರಸ್ಯವಿತ್ತು'.

ಎದುರು ಕೂತವರಲ್ಲಿ, ಆಪ್ತತೆ, ವಿಶ್ವಾಸ ತುಂಬಿ, ಅವರು ನಿರ್ಭಿಡೆಯಿಂದ, ಮುಕ್ತವಾಗಿ ಮಾತನಾಡುವಂತೆ ಮಾಡುವುದು ಅಷ್ಟು ಸುಲಭವಲ್ಲ.

'ನಿಮ್ಮನ್ನು ಅಮ್ಮು ಏನೆಂದು ಕರಿತಿದ್ರು?'

ಒಂದು ಬಲು ದೀರ್ಘ ಮೌನ,

'ಅಮ್ಮುಗೆ ಆರು ವರ್ಷ ಅಷ್ಟೇ, ಅವಳ ತಾಯಿ ತೀರಿಕೊಂಡಾಗ... ಆದರೆ ಅವಳಿಗೆ ತಾಯಿಯ ನೆನಪು ಎಂದೂ ಮಸುಕಾಗಲಿಲ್ಲ. ತನ್ನ ತಾಯಿ ಮತ್ತೆಂದಿಗೂ ಹಿಂತಿರುಗಿ ಬಾರದ ಲೋಕಕ್ಕೆ ಹೋಗಿದ್ದಾಳೆ. ಆ ಜಾಗ ಎಂದೆಂದಿಗೂ ಖಾಲಿಯಾಗಿಯೇ ಉಳಿಯುವಂಥದ್ದು. ಆ ಜಾಗ ಯಾರೂ ತುಂಬಲಾಗದು ಎಂದು ಅವಳ ಮನಸ್ಸಿನಲ್ಲಿ ಅಚ್ಚಾಗಿಹೋಯಿತೇನೋ. ಆ ವಯಸ್ಸಿಗೆ ಸಹಜವಾದ ಲವಲವಿಕೆ, ತುಂಟಾಟ ಎಲ್ಲಾ ಕಳೆದು, ವಯಸ್ಸಿಗೆ ಮೀರಿದ ಗಾಂಭೀರ್ಯ, ಬಿಗಿ ಬಂದಿತ್ತು. ಎಲ್ಲಾ ಒಳಗೇ ಹಿಡಿದಿಟ್ಟುಕೊಂಡಂತೆ, ಮಾತು ಕಳೆದುಕೊಂಡಂತೆ ಆಗಿದ್ದಳು. ಅವಳ ತಂದೆಯನ್ನೂ ಮೀರಿಸುವಂತಹ ಶಿಸ್ತು. ಓದು–ಹವ್ಯಾಸಗಳಲ್ಲಿನ ತಲ್ಲೀನತೆ, ಇವೆಲ್ಲ ಕಂಡಾಗ ಅವಳು ತನ್ನ ಎಳೆವಯಸ್ಸಿನಲ್ಲಿಯೇ ಬಾಲ್ಯಾವಸ್ಥೆಯನ್ನು ದಾಟಿ ಮುಂದಕ್ಕೆ ಹೋದಂತೆ ಅನಿಸುತ್ತಿತ್ತು. ಎಷ್ಟು ಮುದ್ದಾದ ಮಗು ಅವಳು. ಅವಳನ್ನು ಮುತ್ತಿಟ್ಟು, ತಬ್ಬಿ, ಮುದ್ದಾಡಿ, ಆಡಿ, ಅಡ್ಡಾಡಿ, ನಲಿಯುವ ಸೌಭಾಗ್ಯ ನನಗೆ ಸಿಗಲೇ ಇಲ್ಲ. ಅಷ್ಟು ಸಣ್ಣ ವಯಸ್ಸಿನ ಮಗುವಿನ ಆ ನೀರಸ, ನಿರ್ಭಾವ ಇಂದಿಗೂ ನನಗೆ ಒಂದು ಒಗಟಾಗೇ ಉಳಿದಿದೆ. ಬಹುಶಃ ಅವಳ ತಾಯಿಯ ಜಾಗದಲ್ಲಿ ಅತಿಕ್ರಮವಾಗಿ ಬಂದವಳೆಂದೋ ಏನೋ... ಅವಳು ಒಮ್ಮೆಯೂ ನನ್ನನ್ನು ಅಮ್ಮ ಎಂದು ಕರೆದದ್ದೇ ಇಲ್ಲ. ಅವಳೊಂದಿಗೆ ನಾನು ಅನ್ಯೋನ್ಯತೆ ಸಾಧಿಸುವಲ್ಲಿ ಸೋತಿರಬಹುದು. ಆದರೆ ಅವಳ ಬಗ್ಗೆ ನನಗಿರುವ ಪ್ರೀತಿ, ಗೌರವ ಎಳ್ಳಷ್ಟೂ ಮುಕ್ಕಾಗದೇ ಉಳಿದಿದೆ. ಬಹುಶಃ ಅವಳಲ್ಲಿಯೂ ನನ್ನ ಬಗ್ಗೆ ಸುಪ್ತವಾಗಿ ಸುಳಿದಾಡುವ ಒಂದು ಸದ್ಭಾವನೆ ಇತ್ತೇನೊ. ನನ್ನೊಡನೆ ಎಂದೂ ಹದ ತಪ್ಪಿ, ಹಳಿ ತಪ್ಪಿ ನಡೆದುಕೊಂಡದ್ದಿಲ್ಲ. ನಾನು ಕೊನೆಯತನಕ ಅವಳ ಪಾಲಿಗೆ, ಚಿಕ್ಕಮ್ಮನಾಗಿಯೇ ಉಳಿದಿದ್ದು ನನ್ನ ಜೀವನದ ಅತಿ ದೊಡ್ಡ ಸೋಲು'.

ಎದೆಯಾಳದಲ್ಲಿ ಹುದುಗಿದ್ದ ಎಷ್ಟೋ ವರ್ಷದ ನೋವಿನ ನೆನಪುಗಳೆಲ್ಲಾ ಇದ್ದಕ್ಕಿದ್ದಂತೆ ಹೊರದಾರಿಯನ್ನು ಕಂಡುಕೊಂಡಂತೆ, ಮಾತು ಮರೆತ ಮೂಕಿಯಂತಿದ್ದ ಆಕೆಯ ಬಾಯಲ್ಲಿ ಇಂದು ಮಾತಾಗಿ ಮುಕ್ತಿ ಪಡೆದಿತ್ತು. ದುರಾಲೋಚನೆಗಳ ಸೋಂಕಿಲ್ಲದ, ನಿರ್ಮಲ ಹಾಗೂ ಪಾರದರ್ಶಕ ಮನಸ್ಸಿನ ಹೆಂಗಸು ಎಂದು ಸ್ಫುಟವಾಗಿ ವೇದ್ಯವಾಗುತ್ತಿತ್ತು.

'ಈಗ ನಿಮ್ಮ ತಮ್ಮ ರವಿ ಹೆಚ್ಚಿನ ಜವಾಬ್ದಾರಿ ಹೊರಬೇಕಾಗಬಹುದು?'

'ಕೂಪದಲ್ಲಿ ಬಿದ್ದರೆ ಹಾವನ್ನಾದರೂ ಹಗ್ಗವೆಂದು ಹಿಡಿದು ಮೇಲೆ ಬಂದೇನು... ಅಪ್ಪಿತಪ್ಪಿ ಅವನ ಕೈ ಹಿಡಿದರೆ ಕೈಯಲ್ಲಿನ ಬಳೆ ಉಂಗುರ ಕಸಿದು ಮತ್ತೆ ಕೂಪಕ್ಕೇ ದೂಡುವವನು ಅವನು. ಅವನಿಗೆ ನೀತಿ, ನಿಷ್ಠೆ ತಿಳಿಯದ ವಿಷಯಗಳು ಬಿಡಿ... ಇನ್ನು ಜವಾಬ್ದಾರಿ ಹೊರುವುದು ದೂರದ ಮಾತಾಯ್ತು...'

'ಆತ ಏನೂ ಕೆಲಸ ಮಾಡೋದಿಲ್ವ?'

'ಅವನ ಮಾತು ಬಿಡಿ... ಹೇಳಲು ನಮಗೆ ನಾಚಿಕೆಯಾಗುತ್ತದೆ'.

'ಅಮ್ಮು ಅವರಿಗೆ ಯಾರಾದ್ರು ವೈರಿಗಳಿದ್ರಾ?'

'ಆಗ ಒಮ್ಮೆ ಪಕ್ಕದ ಎಸ್ಟೇಟಿನ ಗಣಪತಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದುಂಟು... ಅವನು ಮಹಾಘಾತುಕ... ಯಾವುದಕ್ಕೂ ಹೇಸುವವನಲ್ಲ... ಅಮ್ಮುಗೆ ಸ್ವಲ್ಪ ಎಚ್ಚರಿಕೆಯಿಂದ ಇರಲು ಹೇಳಿದ್ದೆವು. ಅದು ಬಿಟ್ಟರೆ ಇನ್ಯಾರೂ ಅಂಥವರಿಲ್ಲವೇನೊ'.

'ಈಗ ಎಸ್ಟೇಟಿನ ಆಡಳಿತದ ಜವಾಬ್ದಾರಿ?'

'ಚಂದ್ರನ್ ಇದ್ದಾರೆ... ಏನೂ ಅಡ್ಡಿಯಿಲ್ಲ.. ಅದರ ಬಗ್ಗೆ ಇನ್ನೂ ಸ್ವಲ್ಪ ಯೋಚನೆ